
ತಮ್ಮ ೭೨ನೆಯ ವಯಸ್ಸಿನಲ್ಲಿ ಪರಂಧಾಮವನ್ನೈದಿದರು.

### ಅಖಂಡೋಪದೇಶ

(೧) ಆ ಪರಬ್ರಹ್ಮವಸ್ತುವು ನಾನೇ ಆಗಿದ್ದೇನೆ ಎಂಬ ಸತ್ಯಕ್ಕಿಂತ ಉನ್ನತವಾದ ತತ್ತ್ವ ಬೇರೊಂದಿಲ್ಲ. ಆ ತತ್ವವನ್ನು ಸಾಧನೆ ಮಾಡಿ ಅದರಲ್ಲಿ ನೆಲೆನಿಲ್ಲಲು ಪ್ರಯತ್ನಿಸಬೇಕು. ಅದಕ್ಕೆ ಸೇವಾಮಾರ್ಗವೇ ಪರಮೋತ್ಕೃಷ್ಟವಾದುದು. (೨) ಸೇವಾ ಮಾರ್ಗವು ಅತ್ಯಂತ ಕಠಿಣವಾದುದು, ಅಲ್ಲಿ ಹೊಗಳಿಕೆಗೆ ಹಿಗ್ಗದೆ, ತೆಗಳಿಕೆಗೆ ಕುಗ್ಗದೆ, ಸಮುದ್ರಮಥನ ಕಾಲದಲ್ಲಿ ಶಿವನೇ ವಿಷವನ್ನು ಕುಡಿದುದನ್ನು ನೆನೆಯಬೇಕು. (೩) ನಮ್ಮ ಮನಸ್ಸಿಗೆ ಒಗ್ಗದುದನ್ನು ಇನ್ನೊಬ್ಬರ ಬಲವಂತಕ್ಕಾಗಿ ಮಾಡಬಾರದು. (೪) ಪರರ ಗುಣಗಳನ್ನು ಹುಡುಕಿ ಕೊಂಡಾಡಬೇಕು; ಅದು ಇಬ್ಬರಿಗೂ ಆನಂದ. (೫) ಸೇವಾಕಾರ್ಯಗಳನ್ನು ಮಾಡುವಾಗ ಹಿಂದೂ ಕ್ರೈಸ್ತ ಮುಸಲ್ಮಾನ ಎಂಬ ಭೇದವನ್ನು ಎಣಿಸದೆ, ಎಲ್ಲರನ್ನೂ ದೇವರ ಮಕ್ಕಳೆಂದೇ ತಿಳಿಯಬೇಕು. (೬) ಸಾಧುವಾದವನು ಸಂಚಾರ ಶೀಲನೂ, ನಿರಹಂಕಾರಿಯೂ, ಸ್ವಾರ್ಥರಹಿತನೂ, ಸ್ವಾವಲಂಬಿಯೂ, ಗುಣಪಕ್ಷಪಾತಿಯೂ, ಭಕ್ತನೂ ಆಗಿರಬೇಕು.

## ಭಾರತ ಕಂಠೀರವ



ಎಲ್ಲಿ ಮರಗಿಡಬಳ್ಳಿ ಪೊದರಿನ ಹಸುರು ಹಂದರ ಸುಂದರ,
ಎಲ್ಲಿ ಸವಿನೆರಳೆಲ್ಲಿ ಚೆಲುವಿನ ನೋಟ ಮರ್ಮರದಿಂಚರ,
ಎಲ್ಲಿ ಹೂಗಳ ಕಂಪು ಫಲಗಳ ಮಧುರರಸದಾಸ್ವಾದವು,
ಎಲ್ಲಿ ಶಾಂತಿಯ ಬೆಳಗು, ಜೀವನಕೆಲ್ಲಿ ನಡೆ ನಿರ್ಬಾಧವು,
ಅಲ್ಲಿ ಧರ್ಮಾರಣ್ಯವು !
ಅದುವೆ ನಮ್ಮ ಶರಣ್ಯವು !
ಅಲ್ಲಿಹುದೆ ಕಾರ್ಪಣ್ಯವು ?

ಆದರೇನಿದು ? ಸುತ್ತು ಮುತ್ತಲು ಮುತ್ತಿಕೊಂಡಿವೆ ಶ್ವಾಪದ
ತೋಳ ಹುಲಿ ನರಿ ಕರಡಿ ; ಮೆಯ್ದೂಡಿಸಿವೆ ವಂಚನೆ ಧರ್ಮದ
ಜಾತಿಭೇದದ ಭಿನ್ನಪಂಥದ ವೈಮನಸ್ಯದ ವಿಗ್ರಹ
ವಿಪ್ಲವಧ್ವನಿ ವಿಕಟನರ್ತನ ರುದ್ರಭೈರವ ನಿಗ್ರಹ
ಕಿವಿಗೆ, ಕಣ್ಣಿಗೆ, ಚಿತ್ತಕೆ
ತಾಳಲಾರದೆ ತಾಪಕೆ
ಹೇತುವಾಗಿದೆ ಕುತ್ತಕೆ.

ಧರ್ಮವಿಪಿನದಿ ಜೃಂಭಿಸುತ್ತಿದೆ ಸ್ವಾರ್ಥಯಜ್ಞದ ಸಂಭ್ರಮ ;
ಪರರ ನೆತ್ತರ ಕೋಡಿ ಹರಿಯಿಸಿ ಸಿರಿಯ ದೋಚುವ ವಿಕ್ರಮ ;
ಅಟ್ಟಹಾಸದಿ ಮೆಟ್ಟಿ ಕುಣಿಯುವ ಕುಟ್ಟಿ ಕೆಡಹುವ ಧೃಷ್ಟತೆ ;
ಆತ್ಮದುನ್ನತಿಗಿದುವೆ ಸತ್ಪಥವೆಂಬ ಭಾವನಿಕೃಷ್ಟತೆ.
ಸಿಂಹಸಂತತಿಯೇಳದೆ,
ಅರಸುತನವನು ತಾಳದೆ,
ಲೋಕವೇ ಕಂಗೆಟ್ಟಿದೆ.

ಎಚ್ಚರಾಯಿತು ; ಕಣ್ಣ ತೆರೆಯಿತು ; ಪರಿಸರವ ನೆರೆ ನೋಡಿತು ;
ತನ್ನತನವನು ಹುಡುಕಹೊರಟಿತು ; ಸತ್ಯದರ್ಶನವಾಯಿತು.
ಆತ್ಮ ಸಾಕ್ಷಾತ್ಕಾರದಿಂದಾನಂದದಿಂದೆದೆಯುಬ್ಬಿತು;
ಆದರಾ ದಾರಿದ್ರ್ಯದೀನತೆ ಕಂಡು ಕಂಬನಿಯುಕ್ಕಿತು.
ವೀರಗರ್ಜನೆ ಮೊಳಗಿತು ;
ಕರುಣೆಯಿಂ ಗೋಳಿಟ್ಟಿತು ;
ಜಾಡ್ಯವಂ ತರಿದೊಟ್ಟಿತು.

ನುಗ್ಗಿ ಮುಂದಕೆ ಸಾಗಿ ದೂರಕೆ ಚಿನ್ನ ಬೆಳ್ಳಿಯ ಸಿರಿಗಳ
ಶಿಖರಕಂದರಗಳಲಿ ನರ್ತಿಪ ಜೀವಜಾಲದ ಕಲಕಲ
ರಾವಮಧ್ಯದಿ ಧೀರ ಗಂಭೀರದ ನಿನಾದದಿ ಗುಡುಗಿತು ;
ದಿಗ್ದಿಗಂತಕವಾಟ ಬಿರಿಯಿತು ; ಸಿಂಹರಾಜನು ಗೆದ್ದಿತು.
ಅವನೆ ಭಾರತಪುತ್ರನು
ಪರಮಪೂಜ್ಯ ಪವಿತ್ರನು !
ಶ್ರೀ ವಿವೇಕಾನಂದನು.

ವಿಕ್ರಮಕ್ರಮದಿಂದಲೌದಾರ್ಯದ ವಿವೇಕದ ಪಂಥದಿಂ
ರಾಮಕೃಷ್ಣರ ಭಕ್ತ ಮಾರುತಿ ಪಾರ್ಥರಂದದಿ ಸತ್ವದಿಂ
ಲಂಕೆ ಪಾತಾಳಗಳನೆಯ್ದಿದನೂರಿದಂ ವಿಜಯಧ್ವಜ !
ಮರಳಿ ಧರ್ಮಾರಣ್ಯಕೇಸರಿ ವೃಂದವನ್ನೆಚ್ಚರಿಸಿದ ;
ಮೇಲಕೇಳಿರಿ ಜಾಗ್ರತ !
ಗುರಿಯ ಮುಟ್ಟಲು ಸಂತತ
ಹೆಣಗಿ ! ಗೆಲ್ಲಿರಿ ಶಾಶ್ವತ !

ಧರ್ಮಸಂಪದವಿಲ್ಲಿ ಮೆರೆವುದು ಭವ್ಯಹಿಮಗಿರಿಯಂದದಿಂ
ಸಿಂಧುಗಂಗಾ ವಾಹಿನೀಜಲವಾಗಿ ಹರಿವುದು ಚೆಂದದಿಂ
ಹಂತ ! ದಾರಿದ್ರ್ಯಾಧಿದೇವತೆಗಿಲ್ಲೆ ವಾಸವು ಸುಸ್ಥಿರ !
ದಿವ್ಯಮಂದಿರ ಮಸಣವಾಗಿದೆ ! ರುದ್ರನರ್ತನ ಭೀಕರ !
ಬಾಳಿಗಿಲ್ಲವು ನೆಮ್ಮದಿ
ಶಾಂತಿಗಿಲ್ಲದ ಎದೆಗುದಿ
ಧುಂಧುಮಿಪುದಾವೇಗದಿ !

ಎಲ್ಲರೊಂದೇ ತಾಯ ಮಕ್ಕಳು ! ಭೇದಭಾವನೆ ಸಲ್ಲದು
ಬಡವ ಬಲ್ಲಿದ ಮೇಲುಕೀಳೆಂಬೆಣಿಕೆ ಬುದ್ಧಿಗೆ ಹೊಲ್ಲದು
ದೀನದಲಿತಾತುರರ ಸೇವೆಯೆ ಆತ್ಮದುನ್ನತಿ ಕಾರಣ !
ಎಲ್ಲಿ ಹೃದಯದ ಶಾಂತಿ, ವದನದ ನಗುವೆ ಧರ್ಮದ ಕೇತನ !
ಕರ್ಮತತ್ಪರರಾಗಿರಿ !
ಜ್ಞಾನದೀಪವ ಬೆಳಗಿರಿ !
ಸತ್ಯತತ್ವವ ಸಾರಿರಿ !

ಧರ್ಮವಿಪಿನದ ಗವಿಯ ಹೊಕ್ಕರೆ ದೊರೆಯಲಾರದು ಸದ್ಗತಿ !
ಆತ್ಮದರ್ಶನಕಾಗಿ ಮುಂದಕೆ ದೂರ ಸಾಗುವ ಪದ್ಧತಿ
ನಮ್ಮದಾಗಲಿ ! ಜೀವಜಾಲದ ಮೇಲ್ಮೆ ಪೆಂಪಂ ಪಡೆಯಲಿ !
ಸತ್ಯಸುಂದರ ಶಿವವು ನೆಲಸಲಿ ! ಬದುಕು ಕುಂದಣವಾಗಲಿ !
ಬದ್ಧ ಕಂಕಣರಾಗಿರಿ !
ಸಿಂಹವಿಕ್ರಮರಾಗಿರಿ !
ಹಂಸ ಭಾಸ್ವರರಾಗಿರಿ !

ಕೂಡುಬಾಳುವೆ ನಮ್ಮದಾಗಲಿ ! ಕೂಡೆ ಸಾಗಲಿ ಭೋಜನ !
ಕೂಡ ಕೆಚ್ಚೆದೆ ನಮ್ಮದಾಗಲಿ ! ತೇಜ ಬೆಳಗಲಿ ತಿಳಿವಿನ !
ದ್ವೇಷಭಾವದ ಲೇಶವಾದರು ಹೊಂಚದಿರಲೊಂದೊಮ್ಮೆಗೂ !
ಶಾಂತಿ ನೆಲಸಲಿ ! ಶಾಂತಿ ಹಬ್ಬಲಿ ! ಶಾಂತಿಗೇ ಜಯವೆಂದಿಗೂ
ಇದುವೆ ನಮ್ಮಯ ಮಂತ್ರವು,
ಇದುವೆ ಸಾಧಿಪ ಮಂತ್ರವು !
ದಿವ್ಯ ಸಿದ್ಧಿಯ ಮಂತ್ರವು !

ವೀರಬೋಧೆಯಿನಿಂತು ನರಸಿಂಹಗಳನೆಬ್ಬಿಸಿ, ಲೋಕದಿ
ಸರ್ವಧರ್ಮಸಮನ್ವಯವ ಬಿತ್ತರಿಸುವಾಶ್ರಮ ಕೇಂದ್ರದಿ
ಜ್ಞಾನವಿತರಣ ದೀನದಲಿತೋದ್ಧರಣ ಕಷ್ಟನಿವಾರಣ
ಕಾರ್ಯಕಾತ್ಮಾರ್ಪಣವ ಗೈಸಿದ ವೀರಭಾರತನಂದನ
ಶ್ರೀ ವಿವೇಕಾನಂದನ
ಶೀಲ ನಮ್ಮಲ್ಲನುದಿನ
ಬಾಳ್ಗೆ ! ಅಂದಿದು ನಂದನ !

*– ತೆಕ್ಕುಂಜೆ ಗೋಪಾಲಕೃಷ್ಣ ಭಟ್ಟ*

# ವಿದ್ಯಾರ್ಥಿಗಳಿಗಾಗಿ ಪಂಚಶೀಲ

ಸ್ವಾಮಿ ಜಗದಾತ್ಮಾನಂದ

## ೩. ಶಕ್ತಿ

**'ಶ**ಕ್ತಿ' ಎನ್ನುವುದು ಕೇವಲ ಪಾಶವೀ ಬಲವಲ್ಲ ಅಥವಾ ಮತ್ತೊಬ್ಬನನ್ನು ಸೋಲಿಸಿ ನಾಶಪಡಿಸುವ ವಿಧ್ವಂಸಕಾರಿ ಸಾಮರ್ಥ್ಯವೂ ಅಲ್ಲ. ಅದು ನಾಲ್ಕು ಬಗೆ: **(ಅ) ತನ್ನ ಕರ್ತವ್ಯವನ್ನು ಸಮರ್ಪಕ ರೀತಿಯಲ್ಲಿ ನಿರ್ವಹಿಸಲು ಬೇಕಾದ ದೈಹಿಕಶಕ್ತಿ. (ಆ) ಅನಿವಾರ್ಯವಾಗಿ ಜೀವನದಲ್ಲಿ ಬರುವ ಸಂಕಷ್ಟಗಳನ್ನೆದುರಿಸುವ ಮಾನಸಿಕಶಕ್ತಿ. (ಇ) ಎಲ್ಲ ರೀತಿಯ ಭೋಗ ಅಥವಾ ಸುಖಗಳ ವಿಷಯದಲ್ಲಿ ಸಂಯಮ ಹಾಗೂ ಸ್ವನಿಯಂತ್ರಣವನ್ನು ಪಡೆದುಕೊಳ್ಳುವ ಶಕ್ತಿ. {ಈ} ಕೈಗೊಂಡ ಯಾವುದೇ ಕೆಲಸಕಾರ್ಯವನ್ನಾಗಲಿ, ಧ್ಯಾನಸಾಧನೆಯನ್ನಾಗಲಿ, ಏಕಾಗ್ರಚಿತ್ತದಿಂದ ನಿರಂತರ ಸಾಧಿಸುವ ಇಚ್ಛಾಶಕ್ತಿ.**

**"ಹೇಡಿಗಳು ಮಾತ್ರ, ಬಲಹೀನರು ಮಾತ್ರ ಪಾಪವನ್ನು ಮಾಡುವುದು ಮತ್ತು ಸುಳ್ಳನ್ನು ಹೇಳುವುದು ಎಂಬುದನ್ನು ನೆನಪಿನಲ್ಲಿಡಿ. ಧೀರರು ಯಾವಾಗಲೂ ನೀತಿವಂತರಾಗಿರುತ್ತಾರೆ... ಶಕ್ತಿಯೇ ಜೀವನ, ದುರ್ಬಲತೆಯೇ ಮರಣ, ಶಕ್ತಿಯೇ ಪರಮಾನಂದ, ಅಖಂಡ ಜೀವನ, ಅಮರತ್ವ. ದುರ್ಬಲತೆಯೇ ಅನವರತ ದುಃಖ, ತಳಮಳ, ದುರ್ಬಲತೆಯೇ ಮರಣ"** ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಮೊದಲು ದೈಹಿಕಶಕ್ತಿಯನ್ನು ರೂಪಿಸಿಕೊಳ್ಳುವುದು ಅತ್ಯಗತ್ಯ ಎನ್ನುವುದು ಅವರ ಅಭಿಪ್ರಾಯ. "ನಿಮ್ಮ ನರಗಳನ್ನು ದೃಢಪಡಿಸಿಕೊಳ್ಳಿ. ನಮಗೆ ಇಂದು ಬೇಕಾಗಿರುವುದು ಕಬ್ಬಿಣದಂತಹ ಮಾಂಸಖಂಡಗಳು, ಉಕ್ಕಿನಂತಹ ನರಗಳು, ನಾವು ಬೇಕಾದಷ್ಟು ಅತ್ತಿರುವೆವು, ಇನ್ನು ಸಾಕು. ನಿಮ್ಮ ಕಾಲಿನ ಮೇಲೆ ನಿಂತು ಪುರುಷಸಿಂಹರಾಗಿ" ಎಂಬುದು ಅವರ ಉಪದೇಶ. ಮನಸ್ಸು ರೋಗಗಳನ್ನು ಸೃಷ್ಟಿಸಬಲ್ಲದು, ಹಾಗೆಯೇ ಗುಣಪಡಿಸಲೂಬಹುದು. ವಸಿಷ್ಠಮಹರ್ಷಿಗಳು "ರೇಷ್ಮೆಹುಳು ಗೂಡುಕಟ್ಟಿಕೊಳ್ಳುವಂತೆ, ಮನಸ್ಸೇ ದೇಹವನ್ನು ತನ್ನ ಉದ್ದೇಶ ಸಾಧನೆಗಾಗಿ ನಿರ್ಮಿಸಿಕೊಳ್ಳುತ್ತದೆ" ಎನ್ನುತ್ತಾರೆ. **ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ** – "ಮನುಷ್ಯನ ಬಂಧನಕ್ಕೂ, ಮೋಕ್ಷಕ್ಕೂ ಮನಸ್ಸೇ ಕಾರಣ" ಎನ್ನುವುದು ಋಷಿಗಳ ವಾಣಿ. ಅಸಂಖ್ಯ ಯೋಚನೆಗಳು, ಭಾವನೆಗಳು, ಕಲ್ಪನೆಗಳು, ಸಂಕಲ್ಪಗಳು ಇವುಗಳಿಂದ ಕೂಡಿ ನಮ್ಮ ವ್ಯಕ್ತಿತ್ವವನ್ನು ರೂಪಿಸುವ, ಜಟಿಲವೂ, ಅತ್ಯಂತ ಸೂಕ್ಷ್ಮವೂ, ಸಂಕೀರ್ಣವೂ ಆದ ವಿಶಿಷ್ಟಶಕ್ತಿಯೇ ನಮ್ಮ ಮನಸ್ಸು. ಇದು **ಇಚ್ಛೆ, ಕ್ರಿಯೆ** ಮತ್ತು **ಜ್ಞಾನ** ಎಂಬ ಮೂರು ಬಗೆಯ ಆಲೋಚನೆಗಳಿಂದ ಕೂಡಿದೆ. ವಿಶ್ವಾಸ ಪ್ರೀತಿಗಳಿಂದ ಕೂಡಿದ ನಿಷ್ಪಕ್ಷಪಾತ ಪರಿಶೀಲನೆ, ನಿಸ್ವಾರ್ಥದೃಷ್ಟಿ, ಏಕಾಗ್ರತೆ, ಸ್ವಲ್ಪವಾದರೂ ಹಾಸ್ಯದೃಷ್ಟಿ – ಇವು ಇದ್ದರೆ, ಮನಸ್ಸೆಂಬ ಈ ಕಂಪ್ಯೂಟರ್ ಅತ್ಯುಪಯುಕ್ತವಾಗುತ್ತದೆ. ದುರ್ಬಲಗೊಳಿಸುವ, ದುರಂತಕ್ಕೆ ನೂಕುವ ನಿಷೇಧಾತ್ಮಕ ಭಾವನೆಗಳಾದ ಜಡತೆ, ಚಂಚಲತೆ, ಅವ್ಯವಸ್ಥೆ, ಸಿಡುಕು, ಬಲವಾದ ಪೂರ್ವಗ್ರಹಗಳು – ಇವು ಮನಸ್ಸೆಂಬ ಈ ಯಂತ್ರವನ್ನು ಹಾಳುಮಾಡಿಬಿಡುತ್ತವೆ. 'ಋತ' ಅಥವಾ ನೈತಿಕ ನಿಯಮವು ಮನುಷ್ಯನ ಸುಖದುಃಖಗಳನ್ನು ನಿಯಂತ್ರಿಸುತ್ತದೆ. ಮನಶ್ಶಾಂತಿಗಾಗಿ ಎಲ್ಲರೂ ಹಾತೊರೆಯತ್ತಾರೆ; ಆದರೆ ಮಾನಸಿಕ ದಾರ್ಢ್ಯತೆ ಮತ್ತು ಶಾಂತಿ ಲಭ್ಯವಾಗುವುದು ಧಾರ್ಮಿಕ ಹಿನ್ನೆಲೆಯಿದ್ದಾಗ ಮಾತ್ರ.

ಪಾಶ್ಚಾತ್ಯ ಚಿಂತಕರು ತಮ್ಮ ಸಮಾಜ ದುರಂತದೆಡೆಗೆ ಸಾಗುತ್ತಿರುವ ಕಾರಣವನ್ನು ಕುರಿತು ಹೀಗೆನ್ನುತ್ತಾರೆ: "ಜಡ ವಾದ ಅಥವಾ ಭೌತ ವಾದದ ಕಡೆಗಿನ ಒಲವೇ ನಮ್ಮಲ್ಲಿ ಹಿಂಸೆಯ ಪ್ರವೃತ್ತಿಯನ್ನು ಹುಟ್ಟಿಸುತ್ತದೆ. ನಮ್ಮ ಸಮಾಜವು ಕುಟುಂಬ ಅಥವಾ ವರ್ಗದ ನಿಯಂತ್ರಣದ ಮೇಲೆ ಕಟ್ಟಲ್ಪಟ್ಟಿಲ್ಲ; ಅದು ಯಶಸ್ಸಿನ ಮೇಲೆ ನಿಂತಿದೆ. ಯಶಸ್ಸು ಇಲ್ಲದಿದ್ದರೆ ಜನ ಹತಾಶರಾಗುತ್ತಾರೆ, ಹತಾಶೆಯಿಂದ ಹತ್ಯಾಕಾಂಡ–ಹಿಂಸೆ. ಇಕ್ಕಟ್ಟಾದ ಸ್ಥಳಗಳಲ್ಲಿ ಮುಳ್ಳುಹಂದಿಗಳನ್ನಿಟ್ಟರೆ ಒಂದರ ಮುಳ್ಳು ಇನ್ನೊಂದನ್ನು ಚುಚ್ಚಿ ಅವು ನಾಶವಾಗುವಂತೆ, ಮನುಷ್ಯರ ಅತಿಯಾದ ಸ್ವಾರ್ಥವು ಪರಸ್ಪರ ವಿನಾಶಕ್ಕೆ ಕಾರಣವಾಗುತ್ತಿದೆ. ಎಂತಹ ಸಂದರ್ಭದಲ್ಲೂ ಧೀರರ, ಸಂಯಮಿಗಳ ಮನಸ್ಸು ವಿಕಾರ ಹೊಂದದೆ ಶಾಂತವಾಗಿಯೇ ಉಳಿಯುತ್ತದೆ. ಕಷ್ಟ–ಸಂಕಷ್ಟಗಳನ್ನೆದುರಿಸುವ ಈ ಮಾನಸಿಕ ಶಕ್ತಿಗೆ ಕಾರಣ ಧರ್ಮ ಅಥವಾ ನೈತಿಕ ಶಕ್ತಿಯೇ ಆಗಿದೆ. ನೈತಿಕತೆ, ಸದಾಚಾರ ನಿಷ್ಠೆ, ದೇವರಲ್ಲಿ ವಿಶ್ವಾಸ – ಇವು ಯಾವುದೂ ಅತಿರೇಕಕ್ಕೆ ಹೋಗದಂತೆ ಸ್ವನಿಯಂತ್ರಣವನ್ನು ನೀಡಬಲ್ಲವು. ಈ ನಿಯಂತ್ರಣ ಬರೀ ಭೋಗ–ಸುಖಗಳತ್ತಲೇ ನುಗ್ಗುವ ಮನಸ್ಸನ್ನು ಸಂಯಮಗೊಳಿಸಿ, ರಚನಾತ್ಮಕ ಕಾರ್ಯಗಳತ್ತ ಅದನ್ನು ತೊಡಗಿಸಬಲ್ಲದು."

ಹಿಡಿದ ಕೆಲಸವನ್ನು ಪೂರ್ತಿಗೊಳಿಸುವ ದೃಢತೆ, ಏಕಾಗ್ರತೆ ಎಲ್ಲರಲ್ಲೂ ಕಾಣಬರದು. ಇದಕ್ಕೂ ವ್ಯಕ್ತಿತ್ವದಲ್ಲಿ ಅಡಗಿರುವ ಮಾನಸಿಕ ಶಕ್ತಿಯೇ ಕಾರಣ. ಕಷ್ಟವೆಂದೋ, ಇತರರು ನಿರುತ್ಸಾಹಗೊಳಿಸಿದರೆಂದೋ, ಅಡೆತಡೆಗಳು ಬಂದವೆಂದೋ ಹಿಡಿದ ಕೆಲಸವನ್ನು ಕೈಬಿಡುವವರೇ ಬಹಳಷ್ಟು ಮಂದಿ. ಆಧ್ಯಾತ್ಮಿಕ ಸಾಧನೆಯಲ್ಲಿ ಈ ಪ್ರವೃತ್ತಿಯನ್ನು ಕಂಡು, "ಯೋಗಭ್ರಷ್ಟನ ಗತಿಯೇನು ಕೃಷ್ಣಾ?" ಎಂದು ಅರ್ಜುನ ಕೇಳುತ್ತಾನೆ. ಅದಕ್ಕೆ ಶ್ರೀಕೃಷ್ಣನು, **ನ ಹಿ ಕಲ್ಯಾಣಕೃತ್ ಕಶ್ಚಿದ್ದುರ್ಗತಿಂ ತಾತ ಗಚ್ಛತಿ**